# MANGALORE MARKET REPORTS

MMR MEDIA Since 1975

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.48 ENGLISH DAILY Subscription Yearly - Rs. - SATURDAY 14-5-2022



ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.


### ದಾಸ್ತಾನು ಇಳಿಕೆ, ಉತ್ಪಾದನಾ ಇಳಿಕೆಯಿಂದ ಸೋಯಾಬೀನ್ ದರ ಹೆಚ್ಚಳ

ಅಮೇರಿಕಾದ ಹೊಸಬೆಳೆಯ ಅಂತ್ಯದ ದಾಸ್ತಾನು ಇಳಿಕೆ, ಹಾಗೂ ಅರ್ಜೆಂಟಿನಾ, ಬ್ರೆಜಿಲ್‌ಗಳಲ್ಲಿ ಹೊಸಬೆಳೆಯ ಉತ್ಪಾದನಾ ಇಳಿಕೆ ಅಂದಾಜು ಮತ್ತಿತರ ಕಾರಣಗಳಿಂದ ಸೋಯಾಬೀನ್ ದರ ಹೆಚ್ಚಳವಾಗುವ ಸಾಧ್ಯತೆಯಿದೆ. ಮಲೇಶ್ಯಾದ ಪಾಮೆಣ್ಣೆ ರಫ್ತು ನಿರ್ಬಂಧವೂ ಉತ್ಪಾದನಾ ಸೋಯಾಬೀನ್ ದರ ಹೆಚ್ಚಳಕ್ಕೆ ಪೂರಕವಾಗಿದೆ.

### ಜೋಳ, ಗೋಧಿ ದರ ಹೆಚ್ಚಳ

ಪೂರ್ನಿಯಾ ಮಾರುಕಟ್ಟೆಯಲ್ಲಿ ಉತ್ತಮ ಬೇಡಿಕೆ ಹಾಗೂ ಗುಣಮಟ್ಟದಿಂದ ಜೋಳ ದರ ಹೆಚ್ಚಳವಾಯಿತು. ಗೋಧಿ ದರ ಕೋಟಾದಲ್ಲಿ ಹೆಚ್ಚಳವಾಯಿತು. ರಾಬಿ ಜೋಳ ಬೆಳೆ ಬಿಹಾರ ಮತ್ತು ಆಂಧ್ರಪ್ರದೇಶದ ಕರಾವಳಿಗಳಲ್ಲಿ ಹೆಚ್ಚಾಗಿ ಬೆಳೆಯಲಾಗುತ್ತಿದೆ. ಭಾರತದಲ್ಲಿ ಜೋಳ ಉತ್ಪಾದನೆ ಹೆಚ್ಚಳಕ್ಕೆ ಯೋಜಿಸಲಾಗಿದ್ದು ಮುಂದಿನ 5 ವರ್ಷಗಳಲ್ಲಿ ಇಮ್ಮಡಿ ಉತ್ಪಾದನೆಯ ಗುರಿ ಹೊಂದಲಾಗಿದೆ.

### ಬ್ರೆಜಿಲ್‌ನಲ್ಲಿ 2022-23 ರಲ್ಲಿ 19.5 ಶೇಕಡಾ ಹೆಚ್ಚಳದೊಂದಿಗೆ 146 ಮಿಲಿಯನ್ ಟನ್ ಸೋಯಾಬೀನ್ ಉತ್ಪಾದನಾ ಗುರಿ

ಮುಂದಿನ 2022-23 ಬ್ರೆಜಿಲ್‌ನಲ್ಲಿ ಜೋಳ ಉತ್ಪಾದನಾ ಅಂದಾಜಿನಂತೆ 19.5 ಶೇಕಡಾ ಹೆಚ್ಚಳದೊಂದಿಗೆ 146 ಮಿಲಿಯನ್ ಟನ್ ಸೋಯಾಬೀನ್ ಉತ್ಪಾದನೆಯಾಗಲಿದೆಯೆನ್ನಲಾಗಿದೆ. ಉತ್ಪಾದನೆ ಹೆಚ್ಚಳ ಮತ್ತು ಬೇಡಿಕೆ ಇಳಿಕೆಯ ಅಂದಾಜಿನಂತೆ ಮುಂದಿನ ದಿನಗಳಲ್ಲಿ ಸೋಯಾಬೀನ್ ದರ ಇಳಿಕೆಯಾಗಲಿದೆಯೆನ್ನಲಾಗಿದೆ. USDA ಸೋಯಾಬೀನ್ ಹಾಗೂ ಗೋಧಿ ಹಿಂದಿನ ಬೆಳೆಗಳ ಅಂತ್ಯದ ದಾಸ್ತಾನು ಇಳಿಕೆಯ ಅಂದಾಜು ಮಾಡಿದೆ. ಸೋಯಾಬೀನ್ ಈ ವರ್ಷದ ಅಂತ್ಯದ ದಾಸ್ತಾನು ಇಳಿಕೆಯ 25 ಮಿಲಿಯನ್ ಟನ್ ಇಳಿಕೆಯಾಗಿ 23.5 ಮಿಲಿಯನ್ ಟನ್‌ಗಳಾಗಲಿದೆಯೆಂದಿದೆ. ಹಾಗೇಯೇ ಗೋಧಿ ದಾಸ್ತಾನು 65.5 ಮಿಲಿಯನ್ ಬಶೆಲ್ ಆಗಲಿದ್ದು 23 ಮಿಲಿಯನ್ ಬಶೆಲ್ ಇಳಿಕೆಯ ಅಂದಾಜು ಮಾಡಲಾಗಿದೆ.

### ಅಡಿಕೆ ಆಮದು ಮಿತಿಗೊಳಿಸಿ ತಡೆಯಲು ಕಾಂಪ್ಕೋ ಅಧ್ಯಕ್ಷರಾದ ಕಿಶೋರ್ ಕುಮಾರ್ ಕೊಡ್ಗಿಯವರಿಂದ ಪ್ರಧಾನಮಂತ್ರಿ ನರೇಂದ್ರ ಮೋದಿಯವರಿಗೆ ಮನವಿ

ವಿವಿಧ ಮೂಲಗಳಿಂದ ಭಾರತಕ್ಕೆ ಅಡಿಕೆ ಆಮದಾಗುತ್ತಿದ್ದು ಭಾರತದ ಆಂತರಿಕ ಅಡಿಕೆ ಬೆಳೆಯ ಉತ್ಪಾದನೆಯ ಅಡಿಕೆ ದರ ಸ್ಥಿರತೆಗೆ ಹೆಚ್ಚಿನ ಸಮಸ್ಯೆಯಾಗಲಿದ್ದು, ಅಡಿಕೆ ಆಮದು ಮಿತಿಗೊಳಿಸಿ ತಡೆಯಬೇಕೆಂದು ಕಾಂಪ್ಕೋ ಅಧ್ಯಕ್ಷರು ಪ್ರಧಾನಮಂತ್ರಿ ಮನವಿ ಮಾಡಿದ್ದಾರೆಯೆನ್ನಲಾಗಿದೆ. ಭಾರತ ಅಡಿಕೆ ಉತ್ಪಾದನೆಯಲ್ಲಿ ಸ್ವಾವಲಂಬಿಯಾಗಿದ್ದು, ಆಮದು ಹೆಚ್ಚಳದಿಂದ ಉತ್ತಮ ದರ ಕಾಯ್ದು ಕೊಳ್ಳುವಲ್ಲಿ ಸಮಸ್ಯೆಯಾಗುತ್ತಿದೆಯೆನ್ನಲಾಗಿದೆ.